



■ ಶಿ.ಜು. ಪಾಶ

**‘ಕೊಟ್ಟ ಮಾತಿಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು’.**

ಹಾಡುವ ಪ್ರಯತ್ನ ಮಾಡುತ್ತಿದ್ದ ರಥಾಯಚ. ಹಾಡಲು ಬರುವುದಿಲ್ಲವಾದರೂ ಹಾಡಲು ಪ್ರಯತ್ನಿಸುವುದು ಅವನ ರೋಗ.

‘ಕೊಟ್ಟೆ ಮಾತಿಗೆ ಪರಮಾತ್ಮನೇ ಮೈಮೇಲೇರಿ ಕುಣೀತಿರ್ತ್ತಾನೆ. ಇಳಿದ್ಮೇಲೆ ಮಾತಾಡಿದ್ದೇ ನೆನ್ಪಿರಲ್ಲ ನಿಂಗೆ. ಇನ್ನೇನ್ ಕೊಟ್ ಮಾತು ನೆನ್ಪಿರುತ್ತೋ ನಿಂಗೆ...’

ಪೂಜ್ಯಾಯ ಕ್ಯಾತೆ ತೆಗೆದು ಬಾಯ್ತುಂಬಾ ಹಾಕಿಕೊಂಡಿದ್ದ ಎಲೆ ಅಡಿಕೆ ಕಷಾಯವನ್ನು ಪಿಚ್ ಪಿಚ್ ಅಂತ ಆ ಕಡೆಗೆ ಉಗಿದ.

ರಥಾಯಚ ಮತ್ತು ಪೂಜ್ಯಾಯ ಇಬ್ಬರೂ ಒಂದೇ ಚಡ್ಡಿಯೊಳಗಿನ ಎರಡು ಕಾಲಿನಂಥ ಗೆಳೆಯರು. ಈ ಜಗದೊಳಗೆ ಯಾರೂ ಇಟ್ಟುಕೊಳ್ಳಲಾರದಂಥ ಹೆಸರುಗಳು ಈ ಇಬ್ಬರಿಗೆ ತಗಲಾಕ್ಕೊಂಡಿದ್ದು ಅವರವರಿಗೇ ಈಗಲೂ ಅಚ್ಚರಿಯ ವಿಷಯವೇ. ಕೊಟ್ಟೆ ಏರಿಸಿದನೆಂದರೆ ರಥಾಯಚ ಹಾಡುಗಾರನಾಗಲು ಪ್ರಯತ್ನಿಸುವುದು, ಪೂಜ್ಯಾಯ ಟೀಕಾಕಾರನಾಗಿ ರೂಪುಗೊಳ್ಳುವುದು ದಿನ ಬೆಳಿಗ್ಗೆ ಕೇಳುವ ಸುಪ್ರಭಾತದಷ್ಟೇ ಸಾಮಾನ್ಯ, ನಮಗೆಲ್ಲ.

ಹೀಗೆಲ್ಲ ದೃಶ್ಯವೈಭವ ಕಟ್ಟಿಕೊಳ್ಳುತ್ತಿರುವ ಹೊತ್ತಿಗೆ ಮಹಾಶೂನ್ಯದೊಳಗೆ ಪುನರ್ ಪ್ರತಿಷ್ಠಾಪನೆಗೊಂಡಂತೆ ಶೋಭಿತೇ, ರಥಾಯಚ ಮತ್ತು ಪೂಜ್ಯಾಯ ಮಧ್ಯೆ ಸುಂಟರಗಾಳಿ ನುಸುಳಿದಂತೆ ನುಸುಳಿ, ‘ಮಕರ ರಾಶಿಯಲ್ಲಿ ಶುಕ್ರ ಶನಿ ಸಂಯೋಗ, ಭೋ ದೊಡ್ಡ ಬದ್ಲಾವಣೆ ಆಗೋದೈತೆ’ ಎಂದು ಭವಿಷ್ಯ ನುಡಿಯುವಾಗಲೇ, ಆಗಣಿ ಮೈಗೆ ತಗಣಿ ಕಡಿದರೆ ಗುಡಾಣ ಗಾತ್ರ ಗುಳ್ಳೆ ಎದ್ದಿದಂಗೆದ್ದು ಅಜಂತಾ ಓಡೋಡಿ ಬಂದು, ಕುಣಕಾಲಿ ಸೀರಿ ಮೊಣಕಾಲ್ ಮೇಲಂತೆ ಎಂಬಂತೆ ಕುಣಿಕುಣಿದು ಹೇಳುತ್ತಿದ್ದಳು; ಗುಲ್ಜಾರ್ ಮಾಮ ಎಂಥಾ ಚಲೋ ಪದ್ಯಾ ಬರ್ದಾನೆ ನೋಡ್ರೆಲೋ, ಮಂಜುಳಕ್ಕ ಕನ್ನಡಕ್ಕೆ ತಂದೋಳೆ ಕೇಳ್ರಲೋ ಎಂದು ಪದ್ಯ ಓದುವಳು:

ಕಣ್ಣೀರಿನೊಂದಿಗೆ ನೆನಪುಗಳೇನಾದರೂ ಹರಿದು ಹೋಗುವುದಾಗಿದ್ದರೆ ಒಂದೆಡೆ ಕುಳಿತು ಅತ್ತು ಬಿಡುತ್ತಿದ್ದೆ.

ಅಜಂತಾಳ ಅತ್ತುಬಿಡುವ ಮುಖ ಕಂಡು ಲಂಗದಲ್ಲೇ ತನ್ನ ಮುಖ ತಾನೇ ಒರೆಸಿಕೊಂಡ ಶೋಭಿತೇ ಅಜಂತಾಳ ಮುಖವನ್ನೂ ಒರೆಸಲು ಹೊರಟಳು. ಅಜಂತಾ ತಕ್ಷಣಕ್ಕೆ ಪ್ರತಿಕ್ರಿಯಿಸಿ, ‘ಥತ್ ನಿನ್ನ, ಬಿಡು ಅತ್ಲಾಗೆ, ಇದೆಂಥಾ ಬಾಸ್‌ಬಾಸಿ ಲಂಗದೊಳ್ಗೆ ನನ್ ಮುಖ ಒರೆಸ್ತೀ... ಥೂ ಎಂಥಾ ವಾಸ್ನೆನೇ ಈ ನಿನ್ ಲಂಗದೊಳ್ಗೆ ಗಬ್ ಗಬ್ಬು...’ ಅನ್ನೋಕೂ ಶೋಭಿತೇ ತನ್ನ ಲಂಗ ಎತ್ತಿ ಮೂಸಿ, ‘ಎಂಥಿದೆಯೇ ಇದ್ರಲ್ಲಿ? ನೀ ಚುಚ್ಚೋ ಮಾತಾಡ್ಬೇಕು ಮಾತಾಡ್ತಿ... ಈ ಲಂಗ ನೋಡೇ ಫಿದಾ ಆದೋರ ಪಟ್ಟಿ ಹೇಳ್ಬಿಟ್ರೆ ನೀ ಗ್ಯಾನ ತಪ್ಪಿ ಬೀಳೋದು ಗ್ಯಾರಂಟೀನೇ’ ಅಂದು ಮಾತು ಬೆಳೆಸಲು ಪ್ರಯತ್ನಿಸುವಳು.

‘ಚಳಿ ಶುರುವಾಗೋದೇ ತಡ, ಸ್ವಯಂ ಸನ್ಮಾನಕ್ಕೆ ನಿಂತು ಬಿಡ್ತೀಯ ನೀನು. ಶಾಲು ಹೊದೆಸೋರು ಇದ್ದೇ ಇರ್ತಾರೆ, ಲಂಗ ಜೋಪಾನ’ ಎಂದು ಕಿಚಾಯಿಸಿದಳು ಅಜಂತಾ.

ಈ ಇಬ್ಬರ ಮಾತಿನ ನಡುವೆ ಮೌನದಲ್ಲಿದ್ದು ಸಿಲುಕಿಕೊಂಡಿದ್ದ ರಥಾಯಚ ಮತ್ತು ಪೂಜ್ಯಾಯ ಮತ್ತೆ ತಮ್ಮ ವರ್ತಮಾನಕ್ಕೆ ಮರಳುವಂತೆ ಮರಳಿ, ದ್ವೇಷದ ಮೇಲೆ ಪ್ರೀತಿಯನ್ನು ಹರಡಿಸುವ ಎಂದು ಒಕ್ಕೊರಳಲ್ಲಿ ಹೇಳಿ ಅಜಂತಾ ಮತ್ತು ಶೋಭಿತೆಯ ಮುಖ ನೋಡಿದರು. ಅವರಿಬ್ಬರೂ ಅದೇನೆಂದು ಅರ್ಥವಾಗದೇ ಪರಸ್ಪರ ಮುಖ ನೋಡಿಕೊಂಡು ಈ ಇಬ್ಬರ ಮುಖ ನೋಡಿ ಸುಮ್ಮನಾದರು.

‘ಸಾವು ಅಟ್ಟಿಸಿಕೊಂಡು ಬೆನ್ನ ಹಿಂದೆಯೇ ಬರ್ತ್ತಿರೋ ಹಾಗನಿಸ್ತಿದೆ ಕಣೋ’.

ಹಾಡು ಹಾಡಲು ಪ್ರಯತ್ನಿಸುವವನು ಇವತ್ತೇಕೋ ಆತಂಕದಲ್ಲಿದ್ದ. ತನ್ನ ಗೆಳೆಯ ಪೂಜ್ಯಾಯನ ಮುಂದೆ ಮುಖದ ತುಂಬಾ ಮಂಕು ಕವಿಸಿಕೊಂಡು ರಥಾಯಚ ಹೇಳುತ್ತಿದ್ದ.

ಪೂಜ್ಯಾಯ ಈ ಮಾತಿಗೆ ಮುಗುಳ್ನಕ್ಕ. ಎಲ್ಲರ ಬೆನ್ನ ಹಿಂದೆಯೂ ಸಾವಿರೋದೇ. ಇದನ್ನೇ ಯೋಚಿಸಿ ಸಾವಿನ ದವಡೆಗೆ ತಾನೇ ತಾನಾಗಿ ಪಾರ್ಸಲ್ ಆಗ್ತೋಗ್ತಿದಾನಲ್ಲ ಈ ರಥಾಯಚ ಎಂದು ಸಣ್ಣಮಟ್ಟಿಗೆ ತಾನೂ ಆತಂಕಿಸಿದ. ಆದರೂ ಮುಗುಳ್ನಗುತ್ತಲೇ ಕೇಳಿದ: ‘ನಿಂದು ಯಾವ ಪ್ರಭೇದವೋ ಮಾರಾಯ?’ ಆತಂಕದಲ್ಲಿದ್ದ, ಗಂಭೀರ ವದನನಾಗಿದ್ದ ರಥಾಯಚ ಪೂಜ್ಯಾಯನ ಪ್ರಭೇದದ ಮಾತು ಕೇಳಿ, ಆತಂಕದ ವೃತ್ತದಿಂದ ಒಂದಿಂಚು ಕೆಳಕ್ಕೆ ಜಾರಿ, ಅರ್ಥವಾಗದೇ ‘ಹಂಗಂದ್ರೇನೋ?!’ ಪ್ರಶ್ನೆ ಮತ್ತು ಆಶ್ಚರ್ಯ ಒಟ್ಟೊಟ್ಟಿಗಿಟ್ಟು ಕೇಳಿದ.

‘ಬೆಕ್ಕು, ನಾಯಿ, ಮೊಲ, ನಿನ್ನಂಗೇನಾದ್ರು ಯೋಚಿಸ್ತಿದಾವೇನೋ? ಹಂಗ್ ಯೋಚಿಸ್ತಿರೋ ನಿನ್ ಪ್ರಭೇದ ಯಾವ್ದು? ಅಂತ ಕೇಳೋಣ ಅನ್ಸಿ ಕೇಳ್ದೆ’ – ಅವನ ಮುಗುಳ್ನಗು ಒಂದಿಷ್ಟು ಗಾತ್ರ ಹಿಗ್ಗಿಸಿಕೊಂಡಿತ್ತು.

‘ನಾನು ಬದುಕಲಾರೆ... ಸತ್ತು ಬಿಡಬೇಕೆನಿಸುತ್ತಿದೆ’ ರಥಾಯಚ ಮತ್ತೆ ಸಾವಿನ